ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ: 53/2015-16 ದಿ: 10-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಉಳ್ಳಾಗಡ್ಡೆ ರಾಮಯ್ಯ ತಂದೆ:ಲೇಟ್‌ವೀರಭದ್ರಪ್ಪ
2) ಉಳ್ಳಾಗಡ್ಡೆ ಈರಯ್ಯ ತಂದೆ: ಲೇಟ್ ವೀರಭದ್ರಪ್ಪ
3) ಉಳ್ಳಾಗಡ್ಡೆ ಈರಮ್ಮ ಗಂಡ: ಉಳ್ಳಾಗಡ್ಡೆ ರಾಮಯ್ಯ
64 ನಂ: ಹಳೇಕೋಟೆ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಯಂಕಪ್ಪ ತಂದೆ: ವಾಸಪ್ಪ ನವರ ವೀರಭದ್ರಪ್ಪ
64 ನಂ: ಹಳೇಕೋಟೆ ಗ್ರಾಮ ತಾ: ಸಿರುಗುಪ್ಪ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಉಪ್ಪಾರ ಹೊಸಳ್ಳಿ ಗ್ರಾಮ | 13/2<br>14/2<br>64/A | 0–88<br>2–44<br>2–74 | H-53/2015-16 | 208/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಉಪ್ಪಾರ ಹೊಸಳ್ಳಿಗ್ರಾಮದ ಸ.ನಂ. 13/2-ವಿಸ್ತೀರ್ಣ 0–88, 14/2-** ವಿಸ್ತೀರ್ಣ **2–44, ಮತ್ತು 64/A** ವಿಸ್ತೀರ್ಣ **2–74** ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ರಂದು 1) **ಉಳ್ಳಾಗಡ್ಡೆ ರಾಮಯ್ಯ ತಂದೆ: ಲೇಟ್‌ವೀರಭದ್ರಪ್ಪ 2) ಉಳ್ಳಾಗಡ್ಡೆ ಈರಯ್ಯ ತಂದೆ: ಲೇಟ್ ವೀರಭದ್ರಪ್ಪ 3) ಉಳ್ಳಾಗಡ್ಡೆ ಈರಮ್ಮ ಗಂಡ: ಉಳ್ಳಾಗಡ್ಡೆ ರಾಮಯ್ಯ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಯಂಕಪ್ಪ ತಂದೆ:ವಾಸಪ್ಪನವರ ವೀರಭದ್ರಪ್ಪ, 64 ನಂ.ಹಳೇಕೋಟೆ ಗ್ರಾಮ ಇವರು ದಿ:5-12-2015** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:18-3-2016, 2-4-2016, 15-4-2016, 22-4-2016, 20-5-2016, ಮತ್ತು 3-6-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

:2

ವಾದಿಗಳಾದ 1) ರಾಮಯ್ಯ ತಂದೆ: ವೀರಭದ್ರಪ್ಪ 2) ಈರಯ್ಯ ತಂದೆ: ವೀರಭದ್ರಪ್ಪ 3) ಈರಮ್ಮ ಗಂಡ: ರಾಮಯ್ಯ, ಎಲ್ಲಾ ಮೂವರು 64 ನಂ: ಹಳೇಕೋಟೆ ಗ್ರಾಮ ಇವರು ಉಪ್ಪಾರ ಹೊಸಳ್ಳಿ ಗ್ರಾಮದ ಸ.ನಂ. **13/2**- ವಿಸ್ತೀರ್ಣ 0–88, **14/2** - ವಿಸ್ತೀರ್ಣ 2–44, ಮತ್ತು **64/A** ವಿಸ್ತೀರ್ಣ 2–74ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆಗಾಗಿ ಸಲ್ಲಿಸಿದ ಸಂಧರ್ಭದಲ್ಲಿ ನಮ್ಮ ಪಕ್ಕದ ಜಮೀನಿನವರಾದ ಯಂಕಪ್ಪ ತಂದೆ: ವಾಸಪ್ಪನವರ ವೀರಭದ್ರಪ್ಪ 64ನಂ: ಹಳೇಕೋಟೆ ಗ್ರಾಮ ಅವರು ಸ.ನಂ. 13/2 ವಿಸ್ತೀರ್ಣ 0–88 ಸೆಂಟ್ಸ್ ಜಮೀನಿಗೆ ದಿ:3–12–2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಇದು ನಮ್ಮ ಪೂರ್ವಿಕರ ಸಂಪಾದನೆ ಮಾಡಿದ ಆಸ್ತಿಯಾಗಿರುತ್ತದೆ. ಮೋಜಣಿ ಕಾರ್ಯ ನಿರ್ವಹಿಸಿದ ತರುವಾಯ ಅವರ ಜಮೀನು ಇನ್ನೊಬ್ಬರ ಪಕ್ಕದ ಜಮೀನಿನಲ್ಲಿ ಒತ್ತುವರಿಯಾಗಿ ಹೋಗಿರುವುದು ಖಾತ್ರಿಯಾಗಿರುವುದರಿಂದ ಈಗ ಅವರು ತಮ್ಮ ತಕರಾರು ಅರ್ಜಿಯನ್ನು ವಾಪಾಸ್ಸು ಪಡೆದುಕೊಂಡಿರುತ್ತಾರೆ. ಕಾರಣ ನಮ್ಮಗಳ ಹೆಸರಿನಲ್ಲಿ ಜಂಟಿಯಾಗಿ ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಯಂಕಪ್ಪ ತಂದೆ: ವಾಸಪ್ಪನವರ ವೀರಭದ್ರಪ್ಪ 64 ನಂ: ಹಳೇಕೋಟೆ ಗ್ರಾಮ ಇವರು ಉಪ್ಪಾರ ಹೊಸಳ್ಳಿ ಗ್ರಾಮದ ಸ.ನಂ. **13/2** ವಿಸ್ತೀರ್ಣ 0–88, ಜಮೀನು ನನ್ನಪಕ್ಕದ ಇತರೆ ಸ್ವಂತ ಜಮೀನಿನಿಂದ ಒತ್ತುವರಿಯಾಗಿರುತ್ತದೆಂಬ ತಪ್ಪು ಮಾಹಿತಿಯಿಂದಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆಗಾಗಿ 1) ರಾಮಯ್ಯ ತಂದೆ: ವೀರಭದ್ರಪ್ಪ 2) ಈರಯ್ಯ ತಂದೆ: ವೀರಭದ್ರಪ್ಪ 3) ಈರಮ್ಮ ಗಂಡ: ರಾಮಯ್ಯ, ಎಲ್ಲಾ ಮೂವರು 64 ನಂ: ಹಳೇಕೋಟೆ ಗ್ರಾಮ ಎಂಬುವವರು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಸಮಯದಲ್ಲಿದಿ:3–12–2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ಈಗ ಮೋಜಣಿನಂತರ ಇನ್ನೊಬ್ಬರ ಪಕ್ಕದ ಜಮೀನಿನಲ್ಲಿ ಒತ್ತುವರಿಯಾಗಿ ಹೋಗಿರುವುದು ಖಾತ್ರಿಯಾದ್ದರಿಂದ ಸದರಿ ತಕರಾರು ಅರ್ಜಿಯನ್ನು ವಾಪಾಸು ಪಡೆದಿರುತ್ತೇನೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉಪ್ಪಾರ ಹೊಸಳ್ಳಿಗ್ರಾಮದ ಸ.ನಂ. **13/2**- ವಿಸ್ತೀರ್ಣ 0–88, **14/2**- ವಿಸ್ತೀರ್ಣ 2–44, ಮತ್ತು **64/A** ವಿಸ್ತೀರ್ಣ 2–74 ಜಮೀನು ಪೋತಿ ವಾರಸತ್ವ ಪ್ರಕಾರ 1) ರಾಮಯ್ಯ ತಂದೆ: ವೀರಭದ್ರಪ್ಪ 2) ಈರಯ್ಯ ತಂದೆ: ವೀರಭದ್ರಪ್ಪ 3) ಈರಮ್ಮ ಗಂಡ: ರಾಮಯ್ಯ, ಇವರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: *10* –06–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ